ಅಲ್ಲ, ಆ ಟೂರ್ನಿಯಲ್ಲಿ ಗೆದ್ದ ಅತಿ ಕಿರಿಯ ಎನ್ನುವ ದಾಖಲೆ ಕೂಡ ಅವರ ಹೆಸರಿಗೆ ಬಂತು.

2022ರ ಸೆಪ್ಟೆಂಬರ್ 12ರಂದು ವಿಶ್ವದ ನಂಬರ್ ಒನ್ ಆಟಗಾರ ಆದವರು ಅಲ್ಕರಾಜ್. ಯುಎಸ್ ಓಪನ್ ಚಾಂಪಿಯನ್ ಆದದ್ದೂ ಅದೇ ವರ್ಷ. ಮೊದಲ ಗ್ರ್ಯಾಂಡ್ ಸ್ಲ್ಯಾಮ್ ವಿಜಯ ಅದು. 2021ರಲ್ಲಿ ನೆಕ್ಸ್ಟ್ ಜೆನ್ ಎಟಿಪಿ ಫೈನಲ್‌ನಲ್ಲಿ ಗೆದ್ದಮೇಲೆ ಅವರು ಆತ್ಮವಿಶ್ವಾಸದ ಅಲೆಯ ಮೇಲೆ ತೇಲುತ್ತಿದ್ದರು. ಯಾಕೆಂದರೆ, 2022ರವರೆಗೆ ಅವರು ಗೆದ್ದ ಒಟ್ಟು ಒಂಬತ್ತು ಟೂರ್ನಿಗಳಲ್ಲಿ ಐದನ್ನು ಗೆದ್ದ ವರ್ಷ 2021. ಮಿಯಾಮಿ ಹಾಗೂ ಮ್ಯಾಡ್ರಿಡ್‌ನಲ್ಲಿನ ಮಾಸ್ಟರ್ಸ್ ಪ್ರಶಸ್ತಿಗಳೂ ಅದರಲ್ಲಿ ಸೇರಿದ್ದವು. ಆದರೆ, ಈ ವರ್ಷ ಆಸ್ಟ್ರೇಲಿಯಾ ಓಪನ್‌ನಲ್ಲಿ ಕೂಡ ಆಡಲು ಅವರಿಗೆ ಆಗಿರಲಿಲ್ಲ.

ಕಳೆದ ವರ್ಷ ಉದರ ಸಂಬಂಧಿ ಸಮಸ್ಯೆ ಕಾಣಿಸಿಕೊಂಡ ನಂತರ ಎಟಿಪಿ ಫೈನಲ್, ಡೇವಿಸ್ ಕಪ್ ಫೈನಲ್ ಆಡಲು ಆಗಿರಲಿಲ್ಲ. ಹೊಟ್ಟೆಯ ಸಮಸ್ಯೆ ಸರಿಹೋಯಿತು ಎಂದುಕೊಳ್ಳುವಷ್ಟರಲ್ಲಿ ಕಾಲಿನಲ್ಲಿ ನೋವು ಕಾಣಿಸಿಕೊಂಡಿತು. ಆಸ್ಟ್ರೇಲಿಯಾ ಓಪನ್‌ನಲ್ಲಿ ಆಡದಂತೆ ಮಾಡಿದ್ದು ಇದೇ ನೋವು.

ಹೋದ ವರ್ಷದ ನೆನಪಿಗೆ ಜಿಗಿಯೋಣ. ಮೊದಲ ಸೆಟ್‌ನಲ್ಲಿ 6–4ರ ವಿಜಯ. ಎರಡನೆಯದರಲ್ಲಿ 2–6ರ ಸೋಲು. ಮೂರನೆಯದರಲ್ಲಿ ಪರಮ ಹೋರಾಟ. ಕೊನೆಗೆ 7–6 (1)ರಲ್ಲಿ ಗೆಲುವು. ನಾಲ್ಕನೆಯದರಲ್ಲಿ 6–3ರ ಭರ್ಜರಿ ಪುನರಾಗಮನ. ಎದುರಾಳಿ, ನಾರ್ವೆಯ ಕ್ಯಾಸ್ಪರ್ ರೂಡ್ ಬೆವೆತು ಹೋಗಿದ್ದರು. ರಫೆಲ್ ನಡಾಲ್ ನಂತರ ಪುರುಷರ ಗ್ರ್ಯಾಂಡ್ ಸ್ಲ್ಯಾಮ್‌ನಲ್ಲಿ ಬೇರೆ ಯಾವ ತರುಣನೂ ಚಾಂಪಿಯನ್ ಆಗಿರಲಿಲ್ಲ. 2005ರಲ್ಲಿ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ರಫೆಲ್ ನಡಾಲ್ ಅಂಥದೊಂದು ದಾಖಲೆ ಬರೆದಿದ್ದರು. ಮತ್ತೆ ಆ ಅಧ್ಯಾಯದಲ್ಲಿ ತಮ್ಮ ಹೆಸರನ್ನು ಬರೆದದ್ದು ಅಲ್ಕರಾಜ್, ರೂಡ್ ಅವರನ್ನು ಮಣಿಸುವ ಮೂಲಕ. ಯುಎಸ್ ಓಪನ್ ಟೆನಿಸ್ ಗ್ರ್ಯಾಂಡ್ ಸ್ಲ್ಯಾಮ್ ಗೆಲುವು ದಕ್ಕಿದ ಕ್ಷಣವದು.

ಈ ಹುಡುಗನನ್ನು ಮರಿ ರಫೆಲ್ ನಡಾಲ್ ಎನ್ನಲು ಇದೊಂದನ್ನೇ ಉದಾಹರಣೆಯಾಗಿ ಕೊಟ್ಟರೆ ಸಾಲದು. 2022ರಲ್ಲಿ ಮ್ಯಾಡ್ರಿಡ್ ಮಾಸ್ಟರ್ಸ್ ಟೂರ್ನಿಯಲ್ಲಿ ಸತತ ಮೂರು ದಿನಗಳಲ್ಲಿ ಅಲ್ಕರಾಜ್ ತೋರಿದ ಪ್ರದರ್ಶನವನ್ನು ಟೆನಿಸ್‌ಪ್ರಿಯರು ಪದೇ ಪದೇ ಮೆಲುಕು ಹಾಕುತ್ತಾರೆ. ಮೊದಲ ದಿನ ರಫೆಲ್ ನಡಾಲ್, ಎರಡನೇ ದಿನ ನೊವಾಕ್ ಜೊಕೊವಿಚ್, ಮೂರನೇ ದಿನ ಅಲೆಕ್ಸಾಂಡರ್ ಜೆರೆವ್ ಮೂವರನ್ನೂ ಮಣಿಸಿ ಚಾಂಪಿಯನ್ ಆದದ್ದು ಕಣ್ಣಿಗೆ ಹಬ್ಬದಂತಿತ್ತು. ಆವೆಮಣ್ಣಿನ ಟೆನಿಸ್ ಅಂಗಳದಲ್ಲಿ ಸತತ ದಿನಗಳಲ್ಲಿ ನಡಾಲ್, ಜೊಕೊವಿಚ್ ಇಬ್ಬರನ್ನೂ ಮಣಿಸಿದ ಇನ್ನೊಬ್ಬ ಅದುವರೆಗೆ ಜಗತ್ತಿನಲ್ಲಿಯೇ ಇರಲಿಲ್ಲ.

ಅಲ್ಕರಾಜ್ ಟೆನಿಸ್ ಆಡಲು ಶುರುಮಾಡಿದ್ದು ನಾಲ್ಕನೇ ವಯಸ್ಸಿನಲ್ಲಿ. ಸ್ಪೇನ್‌ನ ಅಗ್ರಮಾನ್ಯ ನಲವತ್ತು ಆಟಗಾರರಲ್ಲಿ ಈತನ ತಂದೆ (ಕಾರ್ಲೋಸ್ ಅಲ್ಕರಾಜ್ ಗೊನ್ಜಾಲೆಝ್) ಕೂಡ ಒಬ್ಬರಾಗಿದ್ದ ಕಾಲವೊಂದಿತ್ತು. ಹೀಗಾಗಿ ತಂದೆಯೇ ಮಗನಿಗೆ ಸ್ಫೂರ್ತಿ. ನಡಾಲ್ ಆವೆಮಣ್ಣಿನ ನೆಲದಲ್ಲಿ ಆಡುವುದನ್ನು ಬಿಟ್ಟ ಬಾಯಿಯನ್ನು ಬಿಟ್ಟುಕೊಂಡೇ ಬಾಲಕ ಅಲ್ಕರಾಜ್ ನೋಡುತ್ತಿದ್ದ. ರೋಜರ್ ಫೆಡರರ್ ಸಂಯಮದಲ್ಲಿ ಅದ್ದಿಕೊಂಡು ಬಂದವರಂತೆ ಆಡುವುದನ್ನೂ ಸೂಕ್ಷ್ಮವಾಗಿ ಗಮನಿಸುತ್ತಲೇ ಬೆಳೆದ. ಈಗ ಆಟದಲ್ಲಿ ಅವರಿಬ್ಬರ ವೃತ್ತಿಪರತೆಯನ್ನು ಬೆರೆಸಿದಂತಹ ಪ್ರದರ್ಶನವನ್ನು ಅಲ್ಕರಾಜ್ ನೀಡುತ್ತಿರುವುದು ಕಣ್ಣಿಗೆ ಕಟ್ಟುತ್ತಿದೆ.

2018ರಲ್ಲಿ ವೃತ್ತಿಪರ ಟೆನಿಸ್ ಆಟಗಾರ ಎನಿಸಿಕೊಂಡಾಗ ಅಲ್ಕರಾಜ್‌ಗೆ ಹದಿನೈದು ವರ್ಷ ವಯಸ್ಸು. ಐಟಿಎಫ್ ಫ್ಯೂಚರ್ಸ್ ಹಾಗೂ ಎಟಿಪಿ ಚಾಲೆಂಜರ್ಸ್ ಪಂದ್ಯಗಳಲ್ಲಿ ಆಗ ಆಡತೊಡಗಿದರು. 2020ರಲ್ಲಿ ಮೊದಲ ಎಟಿಪಿ ಟೂರ್ನಿಯನ್ನು ರಿಯೊ ಡಿ ಜನೇರೊದಲ್ಲಿ ಆಡಿದರು. 2021ರ ಜುಲೈ 25ರಂದು ಮೊದಲ ಎಟಿಪಿ ಪ್ರಶಸ್ತಿ ಗೆದ್ದಿದ್ದು ಉಮೊಗ್‌ನಲ್ಲಿ.



ಫ್ರೆಂಚ್ ಓಪನ್ ಕ್ವಾರ್ಟರ್‌ಫೈನಲ್ ಗೆಲುವಿನ ಸಂಭ್ರಮದ ಸಂದರ್ಭ

ಜುಲನ್ ಕಾರ್ಲೋಸ್ ಫೆರೆರೊ ಅಲ್ಕರಾಜ್ ತರಬೇತುದಾರ. ಅವರೂ ಹಿಂದೆ ನಂಬರ್ ಒನ್ ಆಟಗಾರ ಆಗಿದ್ದವರು. 2003ರಲ್ಲಿ ರೋಲ್ಯಾಂಡ್ ಗ್ಯಾರೋಸ್‌ನಲ್ಲೇ ಚಾಂಪಿಯನ್ ಕೂಡ ಆದವರು. ಈಕ್ವೆಲೈಟ್ ಅಕಾಡೆಮಿಯಲ್ಲಿ ಅಲ್ಕರಾಜ್ ಆಟವನ್ನು ಫೆರೆರೊ ಎರಡು ವರ್ಷಗಳಿಂದ ತಿದ್ದುತ್ತಾ ಇರುವ ಅವರಿಗೆ, ಈ ಆಟಗಾರನ ಪ್ರಚ್ಛನ್ನ ಶಕ್ತಿಯ ಮೇಲೆ ಅಗಾಧ ನಂಬುಗೆ. ಫ್ರೆಂಚ್ ಓಪನ್ ಟೆನಿಸ್‌ನ ಕ್ವಾರ್ಟರ್‌ಫೈನಲ್‌ನಲ್ಲಿ ಗ್ರೀಸ್‌ನ ಸಿಟ್ಸಿಪಾಸ್ ಫೇವರೆಟ್ ಎನಿಸಿದ್ದರು. ಆ ಹುಡುಗ ಅನುಭವಿಯಷ್ಟೇ ಅಲ್ಲ, ಸಂಯಮದ ಮೂರ್ತಿ. ವಯಸ್ಸಿನಲ್ಲಿ ಐದು ವರ್ಷ ದೊಡ್ಡವರು. ಅವರ ಎದುರು ಅಲ್ಕರಾಜ್ 6–2, 6–2, 7–6 (7–5) ನೇರ ಸೆಟ್‌ಗಳಲ್ಲಿ ಗೆಲುವು ದಕ್ಕಿಸಿಕೊಂಡಿದ್ದು ರಸಾನುಭವ ನೀಡಿತು. ತಾವು ಮಾಡಿದ ಮೊದಲ ಸರ್ವ್‌ಗಳಲ್ಲೇ ಶೇ 77ರಷ್ಟನ್ನು ಹಣ್ಣು ಮಾಡಿಕೊಂಡ, ತಮ್ಮತ್ತ ಎದುರಾಳಿ ಮಾಡಿದ ಸರ್ವ್‌ಗಳಿಂದ ನುಗ್ಗಿಬಂದ ಚೆಂಡುಗಳಿಗೆ ಪ್ರತ್ಯುತ್ತರ ನೀಡಿ, ಶೇ.49ರಷ್ಟು ಪಾಯಿಂಟ್‌ಗಳನ್ನು ಪಡೆದವರು ಅಲ್ಕರಾಜ್. ಈ ಅಂಕಿಅಂಶ ಅವರ ಕಣ್ಣುಗಳು, ಪಾದ, ಬೆನ್ನುಹುರಿ ಎಲ್ಲವೂ ಎಷ್ಟು ಚುರುಕಾಗಿವೆ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಹೇಳಿದ ಮಾತನ್ನೆಲ್ಲ ಕೇಳುತ್ತಾ ತರಬೇತಿಗೆ ಒಡ್ಡಿಕೊಂಡಿರುವ ಹುಡುಗನ ಮನೋಬಲವನ್ನು ಇನ್ನಷ್ಟು ಹೆಚ್ಚಿಸುವ ಸವಾಲು ಫೆರೆರೊ ಅವರ ಮೇಲಿದೆ.

ಪ್ರತಿಕ್ರಿಯಿಸಿ: feedback@sudha.co.in

